ಬೇರೆಡೆಗೆ ಹೊರಟುಹೋಗಿದ್ದರು. ವಿವಾಹಿತರಾಗಿ... ಉದ್ಯೋಗಸ್ಥರಾಗಿ ಬೆಳಗಾವಿಯಲ್ಲೇ ಉಳಿದವರು ಕೆಲವೇ ಮಂದಿ. ಅನೇಕ ವರ್ಷಗಳು ಹಾಗೇ ಕಳೆದುಹೋದವು. ಮಕ್ಕಳು ತುಸು ದೊಡ್ಡವರಾದಂತೆ... ಅಪ್ಪನ ನೋವಿನ ಗಾಯ ಮಾಯುತ್ತಿದ್ದಂತೆ ಬಾಳು ನೆನಪಾದ. ಬೆಳಗಾವಿಗೆ ಹೋದಾಗ ಒಂದು ದಿನ ಥಟ್ಟನೆ ಮಕ್ಕಳನ್ನು ಕರೆದುಕೊಂಡು ಫಸ್ಟ್ ಗೇಟಿನ ಬಳಿ ಹೋದೆ. ಪೂರ್ತಿ ಬದಲಾಗಿತ್ತು. ತರಕಾರಿಯ ಮಾರ್ಕೆಟ್ ಹೆಚ್ಚು ಜಾಗವನ್ನು ಆಕ್ರಮಿಸಿಕೊಂಡಿತ್ತು. ಒಂದೆರೆಡು ಗಾಡಿಗಳು ನಿಂತಿದ್ದವು. “ಬಾಳುನ ಗಾಡಿ...” ಎಂದೆ. “ಈಗ ಅಂವ ಇಲ್ಲಿಲ್ಲರೀ. ಆರ್.ಪಿ.ಡಿ. ಕಾಲೇಜ್ ಮುಂದನ ಹೋಟೆಲ್ ತಗದಾನ ನೋಡ್ರಿ” ಎಂದರು. ಅಪ್ಪ ಇದ್ದರೆ ಖುಷಿಪಡುತ್ತಿದ್ದರು ಎಂದು ನೆನೆಸಿಕೊಂಡರೂ ಸಾಯಿಬಾಬಾನ ಪ್ರಸಾದವಿಲ್ಲದೇ ಖಾಲಿಯಾದ ಭಾವ. ಮಕ್ಕಳನ್ನು ಕರೆದುಕೊಂಡು ಹೋಗಿ ಅವನ ಹೋಟೆಲ್ ಹುಡುಕಿ... ಪಾವ್‌ಭಾಜಿಗೆ ಆರ್ಡರ್ ಮಾಡಿದೆ. “ಈಗ ಇಲ್ಲೆ ಪಾವ್‌ಭಾಜಿ ಮಾಡುದುಲ್ಲರೀ. ವಡಾಪಾವ್, ಕಚ್ಚಿಧಾಬೇಲಿ, ಚಾಟ್ಸ್... ಬಾಕಿ ಎಲ್ಲಾ ಸಿಗ್ತದ” ಎಂದ ಹುಡುಗ. ಆಶ್ಚರ್ಯಚಕಿತಳಾಗಿ, “ಮದ್ಲಿಂದ ಪಾವ್‌ಭಾಜಿ ಮಾಡಿದವರು ನೀವು. ಈಗ್ಯಾಕ ಮಾಡುದುಲ್ಲ?” ಎಂದು ಕೇಳಿದೆ. “ಈಗ ಅದು ಓಡುದುಲ್ಲರೀ... ಎಲ್ಲಾ ಕಾಲೇಜ್ ಹುಡುಗುರು ಇವನ್ನ ಕೇಳ್ತಾರ” ಎಂದಾಗ ನಿರುತ್ತರಳಾದೆ. “ಮತ್ತ ಬಾಳು?...” ಎಂದಾಗ, “ಅವರಿಗೆ ಆರಾಮ ಇರೂದುಲ್ಲರಿ. ವಯಸ್ಸಾಗೇದ. ಮನ್ಯಾಗ ಇರ್ತಾರ” ಎಂದಿದ್ದ. ಸಿಕ್ಕದ್ದನ್ನು ತಿಂದು ಬಂದರೂ ಮನದ ಹಸಿವೆ ಹಿಂಗಿರಲಿಲ್ಲ. ಆಸೆಯ ಕೊಡ ಬರಿದಾಗಿತ್ತು. ಕಾಲನ ಯಾನದಲ್ಲಿ ಏನೇನೋ ಬದಲಾವಣೆಗಳು. ಹುಟ್ಟಿದ್ದು ಹಳತಾಗುವುದು ಜಗದ ರೀತಿ. ಹೊಸತು ಹಳೆಯದನ್ನು ಬಿಟ್ಟು ಮುಂದೆ ಓಡುವುದೇ ಅಲಿಖಿತ ನಿಯಮ. “ಬ್ಯಾರೇ ನೂರಾ ಎಂಟಕಡೆ ಸಿಗ್ತಾವ. ಯಾಕ ವಿಚಾರ ಮಾಡತಿ? ಉದಯ ಭವನದಾವ ಸೈತ ಛಲೊ ಮಾಡ್ತಾನ” ಎಂದರು ಪರಿಚಯಸ್ಥರು. ಮಕ್ಕಳನ್ನು ಕರೆದುಕೊಂಡು ಹೋಗಿ ತಿಂದು ಬಂದರೂ ಏನೋ ಖಾಲಿಯಾದ ಭಾವ.

ನಂತರ ಕೆಲವು ದಿನಗಳಲ್ಲೇ ಪ್ರತಿಭಾ ಫೋನ್ ಮಾಡಿದ್ದಳು. “ಅಲಕಾ... ಬಾಳು ಹೋಗಿಬಿಟ್ನಂತ...” ಎಂದಳು. “ಬಾಳು...” ಎಂದ ನಾನು ಮುಂದೆ ಮಾತನಾಡುವ ಮೊದಲೇ, “ಅದ ಸಾಯಿಬಾಬಾನ ಪ್ರಸಾದ...” ಎಂದಳು. “ಛೆ! ಪಾಪ...” ಎಂದೆ. “ನಿನಗ್ಯಾರು ಹೇಳಿದರು?” ಎಂದು ಕೇಳಿದೆ. “ನಿವೇದಿತಾ ಫೋನ್ ಮಾಡಿದ್ದಳು” ಎನ್ನುತ್ತಲೇ, “ನಾವು ಹೋಗೋವಾಗನ ಅಂವಗ ನಲವತ್ತು... ನಲವತ್ತೈದು ವರ್ಷ ಇದ್ದು ಅನಸ್ತದ. ಈಗ ವಯಸ್ಸಾಗಿರಬೇಕು. ಖರೆ ನಮ್ಮ ಎಷ್ಟೊಂದು ಗೋಲ್ಡನ್ ಮೆಮೊರೀಸ್ ಅವ...” ಎಂದಳು. ನಾನೂ ಭಾರವಾದ ಹೃದಯದಿಂದ, “ಹೌದು...” ಎಂದು ಅವ ಮದುವೆಯ ನಂತರ ಹೋದಾಗ ನನಗೇ ಪಾರ್ಟಿ ಕೊಟ್ಟಿದ್ದನ್ನು ಜ್ಞಾಪಿಸಿಕೊಂಡೆ. ತಕ್ಷಣ, “ನೀ ನಿಮ್ಮಪ್ಪ ಹೇಳಿಧಂಗ ಅಂವನ್ನ ಮದವಿ ಮಾಡಕೊಳ್ಳಿಲ್ಲಾ ಭಾಳ ಛೊಲೊ ಆತು. ಇಲ್ಲಾಂದ್ರ ಎಷ್ಟು ಪ್ಲೇಟ್ ತೊಳೀತಿದ್ಯೋ ಏನೋ...” ಎಂದಳು. ಇಬ್ಬರೂ ಒಮ್ಮೆಲೆ ‘ಗೊಳ್’ ಎಂದು ನಕ್ಕೆವು.

## ಮಧುರಾ ಕರ್ಣಮ್

ಲೇಖಕಿ ಮಧುರಾ ಬೆಳಗಾವಿಯವರು. ವಿದ್ಯಾಭ್ಯಾಸ – ಬಿ.ಎಸ್ಸಿ., ಎಲ್‌ಎಲ್‌ಬಿ. ಕತೆ, ಪ್ರಬಂಧ, ಹಾಸ್ಯಬರಹಗಳನ್ನು ಬರೆದಿದ್ದಾರೆ. ‘ಮರಳಿ ಬಂದನಾ ವಸಂತ’, ‘ಋಣ’, ‘ಅವಳ ಭಾವಗಳ ಸುತ್ತ’, ‘ಗುಂಡಪುರಾಣ’, ‘ಜೀವಧಾರಾ... ನಿರಂತರಾ...’, ‘ಆಕ್ರಮಣ’ ಸೇರಿದಂತೆ ಹನ್ನೊಂದು ಕೃತಿಗಳನ್ನು ಪ್ರಕಟಿಸಿದ್ದಾರೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.